**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ.ಸಂಖ್ಯೆ: 1397/2018**

**ಪಿರ್ಯಾದಿ :** ಬಿಳಿಗೆರೆ ಪೋಲಿಸರು

**ವಿರುದ್ಧ**

**ಆರೋಪಿತರು :**
1. ಗುರುರಾಜ ಬಿನ್ ಲೇ.ಮಲ್ಲೇಗೌಡ , 38 ವರ್ಷ ,
2. ಮಹದೇವ ಬಿನ್ ಲೇ.ಮಲ್ಲೇಗೌಡ , 42 ವರ್ಷ
3. ಕೆಂಚೇಗೌಡ ಬಿನ್ ಲೇ.ಮರೀಗೌಡ , 55 ವರ್ಷ
4. ಸುಂದರಮ್ಮ ಕೋಂ ಗುರುರಾಜ , 30 ವರ್ಷ

ಎಲ್ಲಾರು ವಾಸ ಗೀಕಳ್ಳಿ ಗ್ರಾಮ, ನಂಜನಗೂಡೂ ತಾ:

**ದೋಷಾರೋಪಣೆ**

**ಶ್ರೀನಾಥ್.ಎ, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶನಾದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-**

ದಿ: **31.01.2018** ರಂದು ರಾತ್ರಿ **09-00** ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಗೀಕಳ್ಳಿ ಗ್ರಾಮದ ಚಾಸಾ-**01** ರವರ ವಾಸದ ಮನೆಯ ಬಳಿ ಆರೋಪಿತರಾದ ನೀವುಗಳು ಚಾಸಾ-**01** ರವರ ಜೊತೆ ಗಲಾಟೆ ಮಾಡುವ ಸಮಾನ ಉದ್ದೇಶದಿಂದ ಚಾಸಾ-**01** ರವರನ್ನು ಬಡ್ಡಿಮಗಳೆ , ಸೂಳೆಮಗಳೆ , ಬಚ್ಚಾಲಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಮಾಡಿ ಶಾಂತಿಯನ್ನು ಭಂಗಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ **504** ಸಹವಾಚಕ **34** ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು **1** ನೇ ಆರೋಪಿಗೆ ಚಾಸಾ-**01** ರವರಿಗೆ ಸರಿಯಾಗಿ ಬುದ್ದಿ ಕಲಿಸು ಮುಂದೆ ಬಂದುದ್ದನ್ನು ನಾವು ನೋಡ್ಕೋತ್ತೀವಿ ಎಂದು **2, 3** ಮತ್ತು **4** ನೇ ಆರೋಪಿತರಾದ ನೀವುಗಳು ಕುಮ್ಮಕ್ಕು ಕೊಟ್ಟ ಕಾರಣ ಭಾರತ ದಂಡ ಸಂಹಿತೆ ಕಲಂ **114** ಸಹವಾಚಕ **34** ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ **1** ನೇ ಆರೋಪಿಯಾದ ನೀವು ಚಾಸಾ-**01** ರವರ ಮನೆಗೆ ಅಕ್ರಮ ಪ್ರವೇಶ ಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ **448** ಸಹವಾಚಕ **34** ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ **1** ನೇ ಆರೋಪಿಯಾದ ನೀವು ಮನೆಯಲ್ಲಿದ್ದ ಚಾಸಾ-**01** ರವರಿಗೆ ಕೈಯಿಂದ ಮೈಕೈಗೆ ಹೊಡೆದು ಸ್ವಯಂ ಪ್ರೇರಿತವಾಗಿ ನೋವನ್ನುಂಟುಮಾಡಿದ ಕಾರಣ ಭಾರತ ದಂಡ

ಸಂಹಿತೆಯ ಕಲಂ 323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು 1 ನೇ ಆರೋಪಿಯಾದ ನೀವು ಚಾಸಾ-01 ರವರಿಗೆ ದೊಣ್ಣೆಯಿಂದ ಬೆನ್ನು ಮೂಳೆ, ಬಲಗೈ ಮುಂದೋಳಿ ಮತ್ತು ಚಾಸಾ-2 ರವರಿಗೆ ದೊಣ್ಣೆಯಿಂದ ಎದೆ , ಹಣೆಗೆ ಹಾಗೂ ಚಾಸಾ-03 ರವರಿಗೂ ದೊಣ್ಣೆಯಿಂದ ಎಡಗೈ ತೋರುಬೆರಳಿಗೆ ಹೊಡೆದು ಚಾಸಾ-01,02 ಮತ್ತು 03 ರವರಿಗೆ ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

**ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.**

ಸಹಿ/-

**ದಿನಾಂಕಃ 26.02.2020** **1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**

**ಸ್ಥಳ ಃ ನಂಜನಗೂಡು** **ನಂಜನಗೂಡು**

**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**ಸಿ.ಸಿ.ಸಂಖ್ಯೆ: 1397/2018**

**ಪಿರ್ಯಾದಿ :** ಬಿಳಿಗೆರೆ ಪೋಲಿಸರು

**ವಿರುದ್ಧ**

**ಆರೋಪಿತರು :**
1. ಗುರುರಾಜ ಬಿನ್ ಲೇ.ಮಲ್ಲೇಗೌಡ , 38 ವರ್ಷ ,
2. ಮಹದೇವ ಬಿನ್ ಲೇ.ಮಲ್ಲೇಗೌಡ , 42 ವರ್ಷ
3. ಕೆಂಚೇಗೌಡ ಬಿನ್ ಲೇ.ಮರೀಗೌಡ , 55 ವರ್ಷ
4. ಸುಂದರಮ್ಮ ಕೋಂ ಗುರುರಾಜ , 30 ವರ್ಷ

ಎಲ್ಲಾರು ವಾಸ ಗೀಕಳ್ಳಿ ಗ್ರಾಮ, ನಂಜನಗೂಡೂ ತಾ:

: ಆಪಾದನೆ :

ಪ್ರಶ್ನೆ1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ :

ಪ್ರಶ್ನೆ2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

ಸಹಿ/-

**ದಿನಾಂಕ: 26.02.2020** **1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
**ನಂಜನಗೂಡು**